ಸಾಕ್ಷಿಯನ್ನು ದಿಃ 24.09.2025. ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಎಸ್.ಕೆ ರವರಿಂದಃ

ನನ್ನ ಮೇಲೆ ಹೊಸನಗರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಾಕದ್ದಮೆ ದಾಖಲಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರಲ್ಲಿ ತಿರ್ಮಾನ ಆಗಿರುತ್ತದೆ ಎಂದು ನುಡಿಯುತ್ತಾರೆ. ಒಬ್ಬನಿಗೆ ಹೊಡೆದಿದ್ದೇನೆ ಎಂದು ಪ್ರಕರಣ ದಾಖಲಾಗಿತ್ತು. ಅದು ಸುಳ್ಳು ಎಂದು ತಿರ್ಮಾನ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. 2018-2019 ರಲ್ಲಿ ನಾನು ನೀಡಿದ್ದ ಹಣವನ್ನು ಅವರ ಬಳಿ ಮರಳಿ ಕೇಳಿದಾಗ ಅವರು ಈ ಪ್ರಕರಣ ದಾಖಲು ಮಾಡಿದ್ದರು. ನಾನು 7-8 ಕೇಸುಗಳನ್ನು ಹಾಕಿರುತ್ತೇನೆ. ಒಂದು ಪ್ರಕರಣದಲ್ಲಿ 25 ಲಕ್ಷ ಕ್ಕೆ ಹಾಕಿರುತ್ತೆನೆ. ಅದನ್ನು ಹೊರತುಪಡಿಸಿ 4 ಲಕ್ಷ ದ ಪ್ರಕರಣ ಇದೇ ನ್ಯಾಯಾಲಯದಲಿ ತಿರ್ಮಾನ ಆಗಿರುತ್ತದೆ. ಇನ್ನೊಂದು 8 ಲಕ್ಷದ ಪ್ರಕರಣ ಇರುತ್ತದೆ ಅದನ್ನು ಹೊರತುಪಡಿಸಿ ಉಳಿದವು 1-2 ಲಕ್ಷದ ಪ್ರಕರಣಗಳು. ಈ ಎಲ್ಲಾ ಪ್ರಕರಣಗಳಲ್ಲೂ ಸಹ ನಗದನ್ನು ನೀಡಿದ್ದೇನೆ ಎಂದೇ ನನ್ನ ನಿಲುವು ಎಂದೆರ ಸರಿ.

ಈ ಪ್ರಕರಣದಲ್ಲಿ ಆರೋಪಿಗೆ ನಾನು ಹಣವನ್ನು ನೀಡಿದ್ದೆ ಎಂದು ಹೇಳಲಾದ ದಿನ ನನ್ನ ಬಳಿ ಅಷ್ಟು ಹಣ ಇದ್ದ ಬಗ್ಗೆ ದಾಖಲಾತಿ ಇದೆ. ನನಗೆ 2018 ನೇ ಇಸವಿಯಿಂದ 3 ಎಕರೆ ಜಮೀನು ಇರುತ್ತದೆ. ಹಾಗೂ ನಾನು ಬ್ಯೂಟಿ ಪಾರ್ಲರ್ ಉದ್ಯೋಗ ಮಾಡುತ್ತೇನೆ. ಸದರಿ 3 ಎಕರೆ ಜಮೀನು ನನ್ನ ಗಂಡನ ಜಮೀನು ಆಗಿದ್ದು, ಅದು ನನಗೆ ಆಗಿರುತ್ತದೆ. ನನ್ನ ಗಂಡನ ಜಮೀನಿನ ಕುರಿತು ಇದೇ ನ್ಯಾಯಾಲಯದಲ್ಲಿ 2 ದಾವೆ ನಡೆಯುತ್ತಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಹೇಳಿದ 3 ಎಕರೆ ಜಮೀನು ಸಹ ದಾವಾ ಸ್ವತ್ತು ಎಂದರೆ ಸರಿ. ನನ್ನ ಸ್ವಂತ ದುಡಿಮೆಯಿಂದ ನಾನು ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ. ಬ್ಯೂಟಿ ಪಾರ್ಲರ್ ಅಲ್ಲಿ ಬೇರೆ ಕೆಲಸಗಾರರು ಇರುವುದಿಲ್ಲ ನಾನು ಒಬ್ಬಳೇ ನಡೆಸುತ್ತೇನೆ. 2019 ರಿಂದ ಬ್ಯೂಟಿ ಪಾರ್ಲರ್ ಗೆ ಲೈಸನ್ಸ್ ಅನ್ನು ನಾನು ಹೊಂದಿರುತ್ತೇನೆ. ಈ ಬಗ್ಗೆ ರಿನಿವಲ್ ಆದ ಬಗ್ಗೆ ನನ್ನ ಬಳಿ ದಾಖಲಾತಿ ಇರುತ್ತದೆ. ಆರೋಪಿ ಶಿವಮೊಗ್ಗದವರು. ನನ್ನ ಹಾಗೂ ಆರೋಪಿಯ ನಡುವೆ ಇದೋಂದೇ ವ್ಯವಹಾರ ಆಗಿರುವುದು. ಈ ಪ್ರಕರಣವನ್ನು ಹೊರತುಪಡಿಸಿ ಆರೋಪಿ ಹಾಗೂ ನನ್ನ ನಡುವೆ ಬೇರೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ.

15 ಲಕ್ಷ ದೊಡ್ಡ ಮೊತ್ತ ಎಂದರೆ ಸರಿ. ಇಷ್ಟು ದೂಡ್ಡ ಮೊತ್ತದ ಹಣವನ್ನ ನೀಡುವಾಗ ನಾನು ಆರೋಪಿಯಿಂದ ಯಾವುದೇ ದಾಖಲೆ ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು ನಿಪಿ-1 ಅನ್ನು ಮಾತ್ರ ತೆಗೆದುಕೊಂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಈ ವ್ಯವಹಾರದಲ್ಲಿ ಆರೋಪಿಯೇ ಬ್ಯಾಂಕಿನ ದರದಲ್ಲಿ ಬಡ್ಡಿಯನ್ನು ಹಾಕಿ ಕೂಡುತ್ತೇನೆ ಎಂದು ನನಗೆ ಹೇಳಿದ್ದರು. ಆರೋಪಿ ಯಾವುದೇ ಬಡ್ಡಿಯನ್ನು ನನಗೆ ಕೊಡಲಿಲ್ಲ ಹಾಗಾಗಿ ನಾನು ಈ ಪ್ರಕರಣ ಸಲ್ಲಿಸಿರುತ್ತೇನೆ.

ಆರೋಪಿಯೇ ಬ್ಯಾಂಕಿನ ದರದಲ್ಲಿ ಬಡ್ಡಿಯನ್ನು ಹಾಕಿ ಕೂಡುತ್ತೇನೆ ಎಂದು ಹೇಳಿದ ಬಾಬ್ತು ಯಾವುದೇ ದಾಖಲಾತಿ ಇರುವುದಿಲ್ಲ. ಸಾಕ್ಷಿ ಮುಂದುವೆರದು ನಾನು ವಕೀಲರಿಗೆ ಮಾಹಿತಿ ತಿಳಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ಈ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಪಿಡಿಸಿರುವುದಿಲ್ಲ ಎಂದರೆ ಸರಿ. ನ್ಯಾಯಾಲಯಕ್ಕೆ ಆರೋಪಿಯೇ ಬ್ಯಾಂಕಿನ ದರದಲ್ಲಿ ಬಡ್ಡಿಯನ್ನು ಹಾಕಿ ಕೂಡುತ್ತೇನೆ ಎಂದು ಹೇಳಿರುತ್ತಾರೆ ಎಂದು ಲಿಖಿತವಾಗಿ ತಿಳಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿ ಏಕದಂತ ಕೊರಿಯರ್ ವ್ಯವಹಾರವನ್ನು ಮಾಡುತ್ತಿದ್ದರು. ಅವರು ಈ ಬಗ್ಗೆ ಒಂದು ಪರ್ಮ್ ಅನ್ನು ಮಾಡಿಕೂಂಡಿರುತ್ತಾರೆ. ಈ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ಆರೋಪಿಯ ಆದಾರ್ ಕಾರ್ಡ ಹಾಗೂ ಇತರೆ ದಾಖಲಾಗಳನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ಕೇವಲ ನಿಪಿ–1 ಅನ್ನು ಪಡೆದಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಸಾಲ ನೀಡುವ ಸಂದರ್ಭದಲ್ಲಿ ಪ್ರಾಮಿಸರಿ ನೋಟನ್ನು ಪಡೆದು ಸಾಲ ನೀಡುತ್ತಿದ್ದೆ ಎಂದರೆ ಸಾಕ್ಷಿ ಆರೋಪಿ ತುಂಬಾ ವಿಶ್ವಾಸದಿಂದ ಇದ್ದುದರಿಂದ ಹಾಗೇ ಸಾಲ ನೀಡಿರುತ್ತೇನೆ ಎಂದು ಉತ್ತರಿಸುತ್ತಾರೆ.

2017 ರಿಂದ ಆರೋಪಿಯೊಂದಿಗೆ ನಾನು ವಿಶ್ವಾಸದಿಂದ ಇದ್ದೇನೆ. ಆರೋಪಿ 2017 ರಿಂದ ಶಿವಮೊಗ್ಗದಲ್ಲಿ ಇದ್ದೆ ಎಂದು ಹೇಳಿದ್ದರು. ನಾನು ಆರೋಪಿಯ ಏಕದಂತ ಕೊರಿಯರ್ಸ ಅನ್ನು ನೋಡಲು ಹೋಗಿರುವುದಿಲ್ಲ ಏಕೆಂದರೆ ಅದು ಚಿಕ್ಕಮಗಳೂರಿನಲ್ಲಿತ್ತು. ನನ್ನ ಪಿರ್ಯಾದಿಯಲ್ಲಿ ಆರೋಪಿಯ ವಿಳಾಸದಲ್ಲಿ ಶಿವಮೊಗ್ಗ ಎಂದು ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿ ಆರೋಪಿಯ ಮನೆಯ ವಿಳಾಸವನ್ನು ನಾನು ನಮೂದು ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಆರೋಪಿ ಚಿಕ್ಕಮಗಳೂರಿನಲ್ಲಿ ಏಕದಂತ ಕೊರಿಯರ್ಸ ಅನ್ನು ಮಾಡುತ್ತಿದ್ದಾರೆ ಎಂದು ನಮೂದು ಮಾಡುವಂತೆ ನಾನು ನನ್ನ ವಕೀಲರಿಗೆ ತಿಳಿಸಿದ್ದೆ. ನಾನು ಪಿರ್ಯಾದುವನ್ನು ಸಲ್ಲಿಸುವ ಮೊದಲು ಓದಿ ನೋಡಿ ಸಹಿ ಹಾಕಿರುತ್ತೇನೆ. ಚಿಕ್ಕಮಗಳೂರಿನಲ್ಲಿ ಆರೋಪಿ ಏಕದಂತ ಕೊರಿಯರ್ಸ ಅನ್ನು ಮಾಡುತ್ತಿರುವ ವಿಚಾರವನ್ನು ಪಿರ್ಯಾದುವಿನಲ್ಲಿ ನಮೂದು ಮಾಡುವಂತೆ ತಿಳಿಸಿದ್ದೀರಾ? ಎಂದರೆ ಸಾಕ್ಷಿ ವಕೀಲರಿಗೆ ತಿಳಿಸಿದ್ದೇನೆ ಆದರೆ ಅವರು ಯಾಕೆ ನಮೂದು ಮಾಡಿರುವುದಿಲ್ಲ ಎಂದು ನನಗೆ ಗೂತ್ತಿಲ್ಲ ಎಂದು ಉತ್ತರಿಸುತ್ತಾರೆ.

ನನ್ನ ಆದಾಯ ತೆರಿಗೆ ರಿಟರ್ನ್ಸ ಅಲ್ಲಿ ಆರೋಪಿಗೆ ಕೊಟ್ಟಿರುವ ಸಾಲವನ್ನು ನಮೂದು ಮಾಡಿರುತ್ತೇನೆ. ನನ್ನ ಖಾತೆಯಲ್ಲಿ ಅಷ್ಟು ಹಣ ಇದ್ದ ಬಗ್ಗೆ ದಾಖಲಾತಿ ಇದೆಯೇ ಎಂದರೆ ಸಾಕ್ಷಿ ಅಷ್ಟು ಮಾತ್ತವನ್ನು ನಾನು ನಗದಾಗಿ ನೀಡಿದ್ದೆ ಎಂದು ಉತ್ತರಿಸುತ್ತಾರೆ. ಈ ನ್ಯಾಯಾಲಯದಲ್ಲಿ ತಿರ್ಮಾನವಾದ ಹಣ ನನಗೆ ಬಂದಿತ್ತು ಅದನ್ನೇ ನಾನು ಆರೋಪಿಗೆ ನೀಡಿದ್ದೆ. ಈ ನ್ಯಾಯಾಲಯದಲ್ಲಿ ತಿರ್ಮಾನವಾದ ಹಣ ನನಗೆ ಬಂದಿತ್ತು ಎಂದು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳಲ್ಲಾಗಲೀ, ಪಿರ್ಯಾದುವಿನಲ್ಲಾಗಲೀ, ಮುಖ್ಯವಿಚಾರಣೆಯಲ್ಲಾಗಲೀ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಆದಾಯ ತೆರಿಗೆ ರಿಟರ್ನ್ಸ ಅಲ್ಲಿ ನಮೂದು

ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಆರೋಪಿ ನನ್ನ ಗಂಡನ ಸ್ನೇಹಿತರಾಗಿದ್ದರಿಂದ ಪರಿಚಿತರಾಗಿರುತ್ತಾರೆ. ಆರೋಪಿಯ ವಯಸ್ಸು 30 ರಿಂದ 32 ವರ್ಷ. ನನ್ನ ಗಂಡ 2018 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಗಂಡ ಮರಣ ಹೊಂದುವಾಗ ಅವರಿಗೆ 60 ವರ್ಷ ವಯಸ್ಸಾಗಿತ್ತು. ನನ್ನ ಗಂಡ ಆರೋಪಿಯೊಂದಿಗೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ ಆದರೆ ಕೇವಲ ಸ್ನೇಹಿತರಾಗಿ ಬಂದು ಹೋಗಿ ಮಾಡುತ್ತಿದ್ದರು. ನನ್ನ ಗಂಡ ಫೈನಾನ್ಸ ಮಾಡುತ್ತಿದ್ದರಿಂದ ಅದೇ ವಿಶ್ವಾಸದಲ್ಲಿ ಆರೋಪಿಯೊಂದಿಗೆ ಸ್ನೇಹ ಬೆಳೆದಿರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.